# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ

**ವಾರ್ಡ್ ಸಂ ಖ್ಯೆ:62 ರಾಮಸ್ವಾಮಿಪಾಳ್ಯ ವಾರ್ಡಿನಲ್ಲಿ ದಿನಾಂಕ:19-12-2020 ರಂದು ನಡೆದ ಸಭೆಯ ನಡವಳಿಗಳು**

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:19-12-2020 ರಂದು ವಾರ್ಡ್ ಸಂಖ್ಯೆ:62 ರಾಮಸ್ವಾಮಿಪಾಳ್ಯ (ಜಯಮಹಲ್ ಪಾರ್ಕ) ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

## ಸಭೆಗೆ ಹಾಜರಿದ್ದವರು

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ |
|---|---|---|
| 1 | ಶ್ರೀ. ಎಸ್,ಉಮೇಶ್ | ಆಧ್ಯಕ್ಷರು /ನೋಡಲ್ ಅಧಿಕಾರಿ ಕಂದಾಯ ಅಧಿಕಾರಿ (ಶಾಂತಿನಗರ) |
| 2 | ಶ್ರೀ.ಎಸ್.ನಿರಂಜನ್ | ಕಾರ್ಯದರ್ಶಿ ಸಹಾಯಕ ಅಭಿಯಂತರರು |
| 3 | ಶ್ರೀ ಸೀತಾರಾಮ್ | ಸದಸ್ಯರು , (ಮೌಲ್ಯ ಮಾಪಕರು ವಾರ್ಡ್ ಸಂಖ್ಯೆ:62) |
| 4 | ಶ್ರೀ.ವಿರೇಶ್ | ಸಹಾಯಕ ಅಭಿಯಂತರರು |
| 5 | ಶ್ರೀಮತಿ.ಜಗದಾಂಭ | ಜೆ.ಸಿ. ನಗರ ಪೊಲೀಸ್ ಠಾಣೆ |
| 6 | ಶ್ರೀ.ಸುರೇಶ | ಜೆ.ಸಿ. ನಗರ ಪೊಲೀಸ್ ಠಾಣೆ |
| 7 | ಶ್ರೀ.ಪ್ರಶಾಂತ ನಾಯಕ | ಕಿರಿಯ ಆರೋಗ್ಯ ನಿರೀಕ್ಷಕರು |
| 8 | ಶ್ರೀ.ಅನಿಲ್‌ಕುಮಾರ್ | ಕಂದಾಯ ಪರಿವೀಕ್ಷಕರು |
| 9 | ಶ್ರೀಮತಿ.ಅನುಸುಯಾ. ಕೆ | ಸದಸ್ಯರು Link Worker |
| 10 | ಶ್ರೀಮತಿ.ಜಯಮ್ಮಾಟಿ | ಸದಸ್ಯರು Link Worker |
| 11 | ಶ್ರೀಮತಿ.ಸುಧಾಮಣಿ | ಸದಸ್ಯರು |
| 12 | ಶ್ರೀಮತಿ.ಆರ್. ಮಹೇಶ್ವರಿ | ಸದಸ್ಯರು |

ದಿನಾಂಕ:19-12-2020 ರಂದು ಮಧ್ಯಾಹ್ನ 3.45 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ. ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ, ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆ ಪ್ರಾರಂಭಗೊಳಿಸಿ ಹಿಂದಿನ ಸಭೇಯಲ್ಲಿ ನಡೆದ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್ 62 ರ ಇಂದಿರಾಕ್ಯಾಟೀನ್ ಹತ್ತಿರ ಕುಡಿಯುವ ನೀರಿನ ಟ್ಯಾಪ್ ಒಡೆದುಹೋಗಿರುವ ಕಾರಣ ದಿನನಿತ್ಯ ನೀರು ಹರಿಯುತ್ತಿರುತ್ತದೆ ಅದನ್ನು ಸರಿಪಡಿಸಲು ನೋಡೆಲ್ ಅಧಿಕಾರಿಯವರು BWSSB ರವರಿಗೆ ಸೂಚಿಸಿದರು.
   ಕ್ರಮ :- AE BWSSB ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸುಚಿಸಲಾಯಿತು.

Scanned with CamScanner

2. ವಾರ್ಡ್ 62 ರ ಇಂದಿರಾ ಕ್ಯಾಂಟೀನ್ ಹಿಂಭಾಗ ಇರುವ ಸಾರ್ವಜನಿಕ ಶೌಚಾಲಯವನ್ನು ಮುಚ್ಚಲಾಗಿದ್ದು, ಸದರಿ ಶೌಚಾಲಯವನ್ನು ಪುನಃ ತೆರೆಯುವಂತೆ ಸೂಚಿಸಿದರು.

   ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

3. ವಾರ್ಡ್ 62 ರಲ್ಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಮತ್ತು ಗ್ಯಾಂಗ್‌ಮನ್‌ಗಳು ಮಾಸ್ಕ್ ಮತ್ತು ಐಡಿ ಕಾರ್ಡ್‌ನ್‌ಗಳನ್ನು ಧರಿಸುವಂತೆ ತಿಳಿಸಿದರು..

   ಕ್ರಮ:- AEE(SWM) & AEE ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

4. ವಾರ್ಡ್ 62 ರಲ್ಲಿ ಪಾದಚಾರಿ ಮಾರ್ಗದಲ್ಲಿ ಅನಧಿಕೃವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಲು ಸ್ಥಳೀಯ ಪೊಲೀಸ್ ಸಂಚಾರಿ ವಿಭಾಗ ಪೊಲೀಸ್ ರವರಿಗೆ ಪತ್ರ ಬರೆಯಲು ಸೂಚಿಸಿದರು.

   ಕ್ರಮ :- ಪೊಲೀಸ್ ಇಲಾಖೆ ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

5. ವಾರ್ಡ್ 62ರಲ್ಲಿ ಕಸ ವಿಲೇವಾರಿ ಮಾಡುತ್ತಿರುವ ಆಟೋ ಟಿಪ್ಪರ್‌ಗಳಿಗೆ ಮೈಕ್ ಅಳವಡಿಕೆ ಬಗ್ಗೆ ವಿಚಾರಿಸಿದಾಗ ಟೆಂಡರ್ ಕರೆಯಲಾಗಿರುತ್ತದೆ. ಜನವರಿ-2021ರಲ್ಲಿ ಆಟೋ ಟಿಪ್ಪರ್‌ಗಳಿಗೆ ಮೈಕ್ ಅಳವಡಿಸಲಾಗುವುದು.

6. ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.
   ವಾರ್ಡ್ 62ರಲ್ಲಿ ಎಷ್ಟು ಮನೆಗಳಿವೆ ಸದರಿ ಮನೆಗಳಿಂದ ಎಷ್ಟು ತೆರಿಗೆ ವಸೂಲು ಮಾಡಲಾಗಿದೆ ಎಂದು ಕೇಳಿದಾಗ ಸಂಬಂಧಿಸಿದವರು ಕೂಡಲೇ ಮಾಹಿತಿಯನ್ನು ನೀಡಿದರು.

   ಕ್ರಮ :- (ARO) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

7. ವಾರ್ಡ್ 62 ರಲ್ಲಿ black spot ನ್ನು ಪೆಮ್ಮೆಗೌಡ ರಸ್ತೆ ಮತ್ತು ಚಿನ್ನಪ್ಪ ಗಾರ್ಡ್‌ನ್ ಮುಖ್ಯರಸ್ತೆಯಲ್ಲಿ black spot ಗಳನ್ನು ತೆರವುಗೊಳಿಸಲಾಗಿದೆ.

   ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು.

8. ವಾರ್ಡ್ 62 ರಲ್ಲಿ ಪೌರಕಾರ್ಮಿಕರ ವಿವರವನ್ನು ಕೇಳಿದಾಗ ಕಿರಿಯ ಆರೋಗ್ಯ ಪರಿವೀಕ್ಷಕರು ಖಾಯಂ ಪೌರಕಾರ್ಮಿಕರು 25 ಜನ ಮತ್ತು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರು 37 ಆಟೋ ಟಿಪ್ಪರ್‌ಗಳು 17, ಕಾಂಪ್ಯಾಂಟರ್ 2 ಎಂದು ತಿಳಿಸಿದರು.

   ಕ್ರಮ :- AEE(SWM) ರವರಿಗೆ ಸದರಿ ವಿಷಯದ ಬಗ್ಗೆ ಕ್ರಮ ವಹಿಸಲು ಸೂಚಿಸಲಾಯಿತು

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡಿರುವ ಬಗ್ಗೆ ಸಭೆಯಲ್ಲಿ ತಿಳಿಸುವುದು. ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಎಸ್. ನಿರಂಜನ್, ಸಹಾಯಕ ಅಭಿಯಂತರರು ಮಧ್ಯಾಹ್ನ 4.30ರವರೆಗೆ ಸಭೆ ಮುಕ್ತಾಯಗೊಳಿಸಲಾಯಿತು.

ವಾರ್ಡ್ ಕಾರ್ಯದರ್ಶಿ
ಸಹಾಯಕ ಅಭಿಯಂತರರು

24/12/2020
ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:62, (ರಾಮಸ್ವಾಮಿಪಾಳ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಿದೆ.
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಸಂತನಗರ ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9) ಸಹಾಯಕ ಕಂದಾಯ ಅಧಿಕಾರಿ (ವಸಂತನಗರ) ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೀದಿ ದೀಪ ಪೂರ್ವ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11) ಸಮಿತಿಯ ಎಲ್ಲಾ ಸದಸ್ಯರ ಅವಗಾಹನೆಗೆ ಕಳುಹಿಸಲಾಗಿದೆ.
12) ಕಛೇರಿ ಕಡತಕ್ಕೆ.

Scanned with CamScanner